ಶ್ರೀ ಬಿ. ಜಿ. ಜಮಖಂಡಿ.—ಇದು ಖಾಸಗಿ ರಂಗದಲ್ಲಿರುವಂತಹ ಒಂದು ದೊಡ್ಡ ಉದ್ದಿಮೆ. ಇದಕ್ಕೆ ಹೊಂದಿಕೊಂಡು ಸುಮಾರು ೧.೨೦೦ ಎಕರೆ ಪ್ರದೇಶ ಕಬ್ಬು ಬೆಳೆಯು ತಕ್ಕಂಥಾದ್ದು ಇದೆ. ವರ್ಷಕ್ಕೆ ಐದು ಲಕ್ಷ ಟನ್‌ಗಳಷ್ಟು ಸಕ್ಕರೆಯನ್ನು ಉತ್ಪಾದನೆ ಮಾಡತಕ್ಕಂಥ ಒಂದು ಸಂಸ್ಥೆ ಇದಾಗಿದೆ. ಇದೊಂದು ದೊಡ್ಡ ಸಂಸ್ಥೆ, ಒಂದು ವೇಳೆ ಇದನ್ನು ವಹಿವಾಟು ಮಾಡುವುದಿಲ್ಲ ಎಂದರೆ, ಓನರ್‌ಶಿಪ್ ಚೇಂಜ್ ಆಗಬಹುದು ಎಂಬುದಾಗಿ ವಿಶ್ವಾಸನೀಯ ಮೂಲಗಳಿಂದ ತಿಳಿದು ಬಂದಿದೆ. ಏಕೆಂದರೆ ಇವರು ಖಾಸಗಿ ರಂಗದವರು ಇದ್ದರೂ ಸಹಿತ ನಮ್ಮ ರೈತರಿಗೆ ಲಕ್ಷಾಂತರ ರೂಪಾಯಿಗಳನ್ನು ಕೊಡುವಂತಹ ಪರಿಸ್ಥಿತಿ ಅಲ್ಲಿ ಬಂದಿದೆ. ಇದರ ಸಲುವಾಗಿ ಅಲ್ಲಿ ಈಗಾಗಲೇ ರೈತರು ಮೊರ್ಚಾ, ಸತ್ಯಾಗ್ರಹ ಮಾಡಿದ್ದಾರೆ. ಒಂದು ವೇಳೆ ಅಲ್ಲಿ ಓನರ್‌ಶಿಪ್ ಚೇಂಜ್ ಮಾಡಿದರೆ ಅಥವಾ ವಹಿವಾಟು ಮಾಡಿದರೆ ಸರಕಾರದವರು ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವುದು ಮುಖ್ಯವಾಗಿದೆ. ಆಕಸ್ಮಾತ್ ಸರಕಾರ ಸೂಕ್ತವಾದ ಕಾರ್ಯಕ್ರಮವನ್ನು ಸರಿಯಾಗಿ ಕೈಗೊಳ್ಳದಿದ್ದರೆ ಒಂದು ವ್ಯವಸ್ಥೆಯನ್ನು ಮಾಡದಿದ್ದರೆ, ಅದನ್ನು ನಡೆಸುವಂತಹ ಒಂದು ಸಾಮರ್ಥ್ಯವನ್ನು ನಮ್ಮ ಸಹಕಾರಿ ವಲಯದ ಅಲ್ಲಿಯ ಜನರು ಹೊಂದಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರು ತಮ್ಮ ಉತ್ತರವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅವರು ಈಗ ಸಂಸ್ಥೆಯನ್ನು ವಹಿವಾಟು ಮಾಡುತ್ತಾ ಇಲ್ಲ. ಎರಡನೆಯದಾಗಿ ಮಾನ್ಯ ಸದಸ್ಯರಿಗೆ ಅಂತಹ ವಿಚಾರವು, ಅವರ ಗಮನಕ್ಕೆ ಬಂದಿದ್ದರೆ, ನಾವು ರೈತರ ಹಿತರಕ್ಷಣೆಗೋಸ್ಕರವಾಗಿ ಕಾನೂನು ಪ್ರಕಾರ ಹಿತರಕ್ಷಣೆ ಮಾಡುವುದಕ್ಕೆ ಸಾಧ್ಯವಿದೆ. ಬೆಲೆ ಫಿಕ್ಷೇಷನ್, ಅಥವಾ ಅವರಿಗೆ ಕೊಡಬೇಕಾದ ಹಣ ಕೊಡುವ ಬಗ್ಗೆ ನಾವು ನೋಡಿ ಕೊಳ್ಳಬಹುದು. ಹೊರತಾಗಿ, ವಹಿವಾಟು ಮಾಡಬೇಡಿ ಎಂದು ನಾವು ಹೇಳುವ ಹಾಗಿಲ್ಲ. ನಮಗೆ ಬಂದಿರುವ ರಿಪೋರ್ಟಿನ ಪ್ರಕಾರ ಕಳೆದ ಎರಡು ವರ್ಷ ಗಳಿಂದ ಅಲ್ಲಿ ಚೆನ್ನಾಗಿ ಕಬ್ಬನ್ನು ಕ್ರಷ್ ಮಾಡಿದ್ದಾರೆ. ಅಲ್ಲದೆ ಅವರು ಪ್ರಾಫಿಟ್ ಮಾಡಿದ್ದಾರೆ. ಆದ್ದರಿಂದ ಈ ಕಾರ್ಖಾನೆಯನ್ನು ಮೊರಾಟ ಮಾಡುವ ಒಂದು ಪರಿಸ್ಥಿತಿಯಲ್ಲಿ ಇಲ್ಲ. ಇನ್ನು ಮಾನ್ಯ ಸದಸ್ಯರು ಹೇಳಿದ ಉಳಿದ ಎರಡು ಸಲಹೆಗಳನ್ನು ಅಂತಹ ಒಂದು ಪರಿಸ್ಥಿತಿಯು ಬಂದಾಗ ನಾನು ಪರಿಶೀಲನೆ ಮಾಡುತ್ತೇನೆ.

ನಾಗರಹೊಳೆ ಹಾಗೂ ಬಂಡೀಪುರ ಅರಣ್ಯಗಳಲ್ಲಿ ದಂತಕ್ಕಾಗಿ ಆನೆಗಳ ಹತ್ಯೆ

೭೧ (೧೮೮) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಳೆದ ೫ ವರ್ಷಗಳಲ್ಲಿ ನಾಗರಹೊಳೆ ಮತ್ತು ಬಂಡೀಪುರ ಅರಣ್ಯದಲ್ಲಿ ದಂತಕ್ಕಾಗಿ ಹತ್ಯೆ ಮಾಡಲ್ಪಟ್ಟಿರುವ ಆನೆಗಳ ಸಂಖ್ಯೆ ಎಷ್ಟು ?

ಆ) ಕಳ್ಳತನವಾದ ದಂತಗಳ ಬೆಲೆಯು ಮೊತ್ತವೆಷ್ಟು ?

ಇ) ಆನೆಗಳ ಹತ್ಯೆ ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ವಿವರಗಳು ಈ ಕೆಳಗಿನಂತಿವೆ

ವರ್ಷ	ನಾಗರಹೊಳೆ	ಬಂಡೀಪುರ
೧೯೮೨–೮೩	೨	೦
೧೯೮೩–೮೪	೦	೦
೧೯೮೪–೮೫	೦	೦
೧೯೮೫–೮೬	೦	೩
೧೯೮೬–೮೭	೦	೪
	೫	೧೦

ಆ) ಆನೆಗಳ ದಂತಗಳು ಕಳುವಾಗಿರುವುದರಿಂದ ಅವುಗಳ ಬೆಲೆಗಳನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ.

ಇ) ೧೯೮೩–೪೪ನೇ ಸಾಲಿನಿಂದೀಚೆಗೆ ಆನೆಗಳ ಹತ್ಯೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮ ಇಂತಿದೆ :

ಎ) ಕಾಡಲು ಸಿಬ್ಬಂದಿಗೆ ಶೀಘ್ರ ಸಂಪರ್ಕಕ್ಕಾಗಿ ೩೫ ಸಿಸ್ತಂತು ಜಾಲಗಳನ್ನು ಆಳವಡಿಸಲಾಗಿದೆ.

ಬಿ) ಗಡಿ ಪ್ರದೇಶದ ಅಧಿಕಾರಿಗಳಿಗೆ ಶೀಘ್ರಚಲನೆಗಾಗಿ ೧೩ ವಾಹನಗಳ ಸವಲತ್ತನ್ನು ಕೊಡಲಾಗಿದೆ.

ಸಿ) ಸೂಕ್ಷ್ಮ ಪ್ರದೇಶಗಳಲ್ಲಿ ಆನೆ ಹಂತಕರನ್ನು ಎದುರಿಸಲು ಮತ್ತು ಆತ್ಮ ರಕ್ಷಣೆಗೆ ೧೭೭ ಡಿ.ಬಿ.ಬಿ.ಎಲ್ ಬಂದೂಕು ಹಾಗೂ ಮದ್ದು ಗುಂಡುಗಳನ್ನು ಸರಬರಾಜು ಮಾಡಲಾಗಿದೆ.

ಡಿ) ರಾಜ್ಯಗಳ ಗಡಿ ಪ್ರದೇಶದ ಅರಣ್ಯ ಹಾಗೂ ಆರಕ್ಷಕ ಅಧಿಕಾರಿಗಳು ಆಗ್ಗಾಗ್ಗೆ ಸಂಧಿಸಿ ಆನೆ ಹತ್ಯೆಯನ್ನು ತಡೆಯುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಪರ್ಕ ಸಭೆಗಳನ್ನು ಏರ್ಪಡಿಸಲಾಗಿದೆ.

ಇ) ಕ್ಷೇತ್ರೀಯ ಸಿಬ್ಬಂದಿಗಳಿಗಾಗಿ ವಾಕಿ–ಟಾಕಿ ಯಂತ್ರಗಳನ್ನು ಶೀಘ್ರ ಮಾಹಿತಿ ಪಡೆಯಲು ಏರ್ಪಡಿಸುವ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಈ ಎಲ್ಲಾ ಪ್ರಕರಣಗಳೂ ಆರಕ್ಷಕ ಇಲಾಖೆಯವರಿಂದ ತನಿಖೆಯಾಗುತ್ತಿವೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ''ಆನೆಗಳ ದಂತಗಳು ಕಳವಾಗಿರುತ್ತವೆ ಅವುಗಳ ಬೆಲೆಗಳನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ'' ಎಂದು ಉತ್ತರಿಸಿದ್ದಾರೆ. ನಮ್ಮಲ್ಲಿ ಒಂದು ಗಾದೆ ಮಾತು ಇದೆ. ಆನೆಗೆ ಬದುಕಿದರೂ ಬೆಲೆ, ಸತ್ತರೂ ಬೆಲೆ ಎಂದು. ೧೫ ಆನೆಗಳ ೩೦ ಕೋಂಬುಗಳ ಅಂದಾಜು ಬೆಲೆ ತಾವುಗಳು ಕೊಡಬಹುದಾಗಿತ್ತು. ೧೯೮೬–೮೭ರಲ್ಲಿ ಬಂಡೀಪುರದಲ್ಲಿ ನಾಲ್ಕು ಆನೆಗಳು ಕೊಲೆ ಆಗಿವೆ. ಕೊಲೆಗಳನ್ನು ತಡೆಗಟ್ಟಲು ತೆಗೆದುಕೊಂಡ ಕ್ರಮಗಳ ಬಗ್ಗೆ ಹೇಳಿದ್ದಾರೆ. ಬಂದೂಕುಗಳನ್ನು ಕೊಟ್ಟಿದ್ದೇವೆ. ಆದು ಕೊಟ್ಟಿದ್ದೇವೆ ಇದು ಕೊಟ್ಟಿದ್ದೇವೆ, ಎಂದು ಹೇಳಿದ್ದಾರೆ. ಇಷ್ಟು ಕ್ರಮಗಳನ್ನು ತೆಗೆದುಕೊಂಡರೂ ೧೯೮೬–೮೭ರಲ್ಲಿ ನಾಲ್ಕು ಆನೆಗಳು ಕೊಲೆ ಆಗಬೇಕಾಗಿದ್ದರೆ, ಅದಕ್ಕೆ ಕಾರಣ ಏನು ? ಅಧಿಕಾರಿಗಳ ನಿರ್ಲಕ್ಷವೇ ? ಜವಾಬ್ದಾರಿಯೇ ? ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಹೇಳುತ್ತೀರಾ ?

ಶ್ರೀ ಜೆ.ಎಸ್. ದೇಶ್‌ಮುಖ್.—ದಂತಗಳ ಬೆಲೆ ಎಷ್ಟು ಎಂದು ನಿರ್ದಿಷ್ಟವಾಗಿ ಗೊತ್ತು ಮಾಡಲಿಕ್ಕೆ ಆಗಲಿಲ್ಲ. ಏಕೆಂದರೆ ಅವುಗಳು ೧೦–೧೫ ವರ್ಷಗಳೆದ್ದು ಇರಬಹುದು. ಅಂತೆಯೇ ಈಗಾಗಲೇ ಕೊಲ್ಲಲ್ಪಟ್ಟ ಆನೆಗಳು ನಮ್ಮ ರಾಜ್ಯದ್ದು ಅಲ್ಲ. ರಾಜ್ಯದ ಗಡಿ ಭಾಗಗಳ ಪ್ರದೇಶದ್ದೂ ಇರಬಹುದು. ಆದರೆ ನಮ್ಮ ಅಧಿಕಾರಿಗಳು ಗಡಿ ಭಾಗದಲ್ಲಿನ ಅಪರಾಧಿಗಳನ್ನು ಅರೆಸ್ಟ್ ಮಾಡಿದ್ದಾರೆ. ತನಿಖೆ ನಡೆಯುತ್ತಿದೆ. ಎಷ್ಟು ಮಂದಿಯನ್ನು ಈಗಾಗಲೇ ದಸ್ತಗಿರಿ ಮಾಡಲಾಗಿದೆ ಎಂದು ಹೇಳುವುದು ಸಮಸ್ಯೆ ಅಲ್ಲ. ಒಂದು ಅಂದಾಜಿನಂತೆ ಹೇಳುವುದಾದರೆ ಅಂದಾಜು ಮೌಲ್ಯ ೧೦–೨೦ ಸಾವಿರ ರೂಪಾಯಿಗಳು ಆಗಬಹುದು.

ಶ್ರೀ ವೇದಾಂತ ಹೆಮ್ಮಿಗೆ.—ಇದುವರೆಗೆ ಎಷ್ಟು ಜನರನ್ನು ಬಂಧಿಸಿದ್ದಾರೆ, ಅವರಿಗೆ ಏನು ಶಿಕ್ಷೆ ಆಗಿದೆ, ವಶಪಡಿಸಿಕೊಂಡಿರುವ ದಂತಹಗಳ ಬೆಲೆ ಎಷ್ಟು ?

ಶ್ರೀ ಜೆ.ಎಸ್. ದೇಶ್‌ಮುಖ್.—ನಾನು ಅಂದಾಜು ಬೆಲೆಯನ್ನು ಈಗಾಗಲೇ ಹೇಳಿದ್ದೇನೆ. ೧೦ ರಿಂದ ೨೦ ಸಾವಿರ ರೂಪಾಯಿಗಳ ವರೆಗೆ ಆಗಬಹುದು. ಕೆಲವರನ್ನು ಈ ಸಂಬಂಧವಾಗಿ ದಸ್ತಗಿರಿ ಮಾಡಿದ್ದೇವೆ. ಹಾಗೆಯೇ ಹಂತಕರ ಸುಳಿವು ಕೊಟ್ಟವರಿಗೆ ೫೦೦೦ ರೂಪಾಯಿಗಳ ಬಹುಮಾನವನ್ನು ಕೂಡ ಘೋಷಿಸಿ ಮಾಡಿದ್ದೇವೆ. ಸೂಕ್ತವಾದ ತನಿಖೆಯನ್ನು ಮಾಡುತ್ತೇವೆ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ :ಯಾರೂ ಆರೆಸ್ಟ್ ಆಗಿಲ್ಲ. ಮೈಸೂರು ಸಿಟಿಯಲ್ಲಿ ಯಾರನ್ನೂ ಕೂಡಾ ಇದರ ಬಗ್ಗೆ ದಸ್ತಗಿರಿ ಮಾಡಿಲ್ಲ.

(ಶ್ರೀ ವೇದಾಂತ ಹೆಮ್ಮಿಗೆ, ಬಸವನಗೌಡ, ಬೇಗಂ ಮುಕ್ತರುನ್ನಿಸಾ ಇವರುಗಳು ಒಮ್ಮೆಗೆ ಎದ್ದು ನಿಂತು ಮಾತನಾಡತೊಡಗಿದರು)

ಅಧ್ಯಕ್ಷರು.—ದಯವಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀಮತಿ ಮುಖ್ತರುನ್ನೀಸಾ ಬೇಗಂ.—ಬಂಡೀಪುರದಲ್ಲಿಯೂ ಯಾರೂ ಆರೆಸ್ಟ್ ಆಗಲಿಲ್ಲ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈಗಾಗಲೇ ಉತ್ತರ ಹೇಳಲಾಗಿದೆ.

ಶ್ರೀ ವೇದಾಂತ ಹೆಬ್ಬಿಗೆ.—ಕ್ಷೇತ್ರೀಯ ಸಿಬ್ಬಂದಿಗಾಗಿ ವಾಕಿ-ಟಾಕಿ ಯಂತ್ರಗಳನ್ನು ಶೀಘ್ರ ಮಾಹಿತಿ ಪಡೆಯಲು ಖರೀದಿಸುವ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದೀರಿ. ಇನ್ನೂ ಖರೀದಿ ಮಾಡಿಲ್ಲ. ಯಾವಾಗ ಖರೀದಿ ಮಾಡುತ್ತೀರಿ ? ಆನೆಗಳು ಸತ್ತ ಮೇಲೆ ಖರೀದಿ ಮಾಡುತ್ತೀರಾ ?

ಶ್ರೀ ಜೆ. ಎಸ್. ದೇಶ್‌ಮುಖ್.—ಈಗಾಗಲೇ ೩೦ ಖರೀದಿ ಮಾಡಿದ್ದೇವೆ. ಇನ್ನೂ ೫೦ ಖರೀದಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ.

ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಬೆಳೆಸಲು ವೆಚ್ಚವಾದ ಮೊಬಲಗು

೭೧ (೩೭೩)(ಡಿ) ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ೧೯೪೪-೪೫ ಹಾಗೂ ೧೯೪೫-೪೬ನೇ ಸಾಲಿನಲ್ಲಿ ಅರಣ್ಯ ಬೆಳೆಸಲು (ಹೊಸದಾಗಿ) ಖರ್ಚು ಮಾಡಿದ ಮೊಬಲಗು ಎಷ್ಟು ?

ಆ) ಎಷ್ಟು ಎಕರೆ ವಿಸ್ತೀರ್ಣಗಳಲ್ಲಿ ಅರಣ್ಯ ಬೆಳೆಸಲಾಗಿದೆ ?

ಶ್ರೀ. ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ೧೯೪೫ ಮತ್ತು ೧೯೪೬ನೇ ಪರ್ಷಗಳಲ್ಲಿ ಒಟ್ಟು ರೂ. ೨.೩೮ ಕೋಟಿಗಳನ್ನು ಅರಣ್ಯ ಬೆಳೆಸಲು ಖರ್ಚು ಮಾಡಲಾಗಿದೆ, ವಿವರಗಳು ಈ ಕೆಳಗಿನಂತಿವೆ.

ವಿಭಾಗ	೧೯೪೪-೪೫	೧೯೪೫-೪೬
ಶಿವಮೊಗ್ಗ	೩೭,೦೯,೦೦೦	೪೧,೦೯,೫೦೦
ಸಾಗರ	೫೪,೨೬,೦೦೦	೬೪,೬೯,೪೦೦
ಭದ್ರಾವತಿ	೨೩,೬೫,೭೦೦	೧೭,೧೦,೦೦೦
ಒಟ್ಟು	೧,೧೫,೦೦,೭೦೦	೧,೨೨,೯೪,೯೦೦

ಆ) ಅರಣ್ಯ ಇಲಾಖೆಯ ಮುಖಾಂತರ ೪೧೯೭ ಹೆಕ್ಟೇರ್‌ಗಳಲ್ಲಿ ಅರಣ್ಯ ಬೆಳೆಸಲಾಗಿದೆ. ವಿವರಗಳು ಈ ಕೆಳಗಿನಂತಿವೆ;

ಶಿವಮೊಗ್ಗ	೭೭೩.೨೭ ಹೆಕ್ಟೇರ್‌ಗಳು	೪೪೬.೯೬ ಹೆಕ್ಟೇರ್‌ಗಳು
ಸಾಗರ	೬೩೮.೪೬ ,,	೭೩೨ ೩೮ ,,
ಭದ್ರಾವತಿ	೪೨೧.೯೫ ,,	೫೯೨.೭೧ ,,
ಒಟ್ಟು	೨೦೨೫.೦೪ ಹೆಕ್ಟೇರ್‌ಗಳು	೨೧೭೨.೦೫ ಹೆಕ್ಟೇರ್‌ಗಳು

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಅಂಕಿ ಅಂಶದಿಂದ ತೃಪ್ತಿಪಟ್ಟುಕೊಂಡರೆ ಸಾಲದು. ಈ ಅರಣ್ಯ ಬೆಳೆಸುವುದಕ್ಕೆ ಏನು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತೀರಿ ಅದೇ ರೀತಿ ಈ ಗಿಡಗಳನ್ನು ಸಂರಕ್ಷಣೆ ಮಾಡುವುದಕ್ಕೆ ಕಾಳಜಿ ವಹಿಸಬೇಕು. ಆದುದರಿಂದ ಈ ಗಿಡಮರಗಳನ್ನು ಸಂರಕ್ಷಣೆ ಮಾಡುವುದಕ್ಕೆ ತಾವೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ನಾನು ಈ ವಿಷಯವನ್ನು ಏತಕ್ಕೆ ಕೇಳುತ್ತಿದ್ದೇನೆ ಎಂದರೆ ಒಂದು ಕಡೆಯಿಂದ ಗಿಡಗಳನ್ನು ಹಾಕಿಕೊಂಡು ಬಂದರೆ ಮತ್ತೊಂದು ಕಡೆಯಿಂದ ಕೆಲವು ಗಿಡಗಳು ಹೋಗಿರುತ್ತವೆ. ಆದುದರಿಂದ ಇದರ ಸಂರಕ್ಷಣೆ ಬಗ್ಗೆ ಏನು ಮಾಡಿದ್ದೀರಿ ?